ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.**761/2021**

ಸಾಕ್ಷಿಯ ಹೆಸರುಃ ರಫಿಕ್ ಚಾಸಾ ಃ 5

ತಂದೆ ಹೆಸರುಃ ಶೇಕ್ ಮಹಮದ್ ಪ್ರಾಸಾಃ 2

ವಯಸ್ಸುಃ 32 ವರ್ಷ

ಉದ್ಯೋಗಃ ಪೈಂಟಿಂಗ್ ಕೆಲಸ

ವಾಸಃ ಕೊಪ್ಪ

ದಿನಾಂಕಃ 20/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಿಪಿ1 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಶೋಧನಾ ಸಮುಚಿತದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5 ಬಿ ಎಂದು ಗುರುತಿಸಲಾಯಿತು. ನಿಪಿ.1 ರ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೆ ಮದ್ಯವನ್ನು ಪೋಲಿಸರು ವಶಕ್ಕೆ ಪಡೆದಿರುವುದಿಲ್ಲ. ನಿಪಿ.1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2 ಮತ್ತು 3 ಅನ್ನು ಯಾವ ಉದ್ದೇಶಕ್ಕೆ ತೆಗೆಯಲಾಗಿರುತ್ತದೆ ಎಂದು ಗೊತ್ತಿಲ್ಲ.

ಪೋಲಿಸರ ಕೋರಿಕೆ ಮೇರೆಗೆ ನಿಪಿ.1 ಕ್ಕೆ ಸಹಿ ಮಾಡಿರುತೇನೆ. ಮುದ್ದೆ ಮಾಲು 1 ರಿಂದ 3 ಅನ್ನು ಗುರುತಿಸಿರುವುದಿಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಹಿಂದೆ ನಾನು ನೋಡಿರುವುದಿಲ್ಲ. (ನ್ಯಾಯಾಲಯದ ಮುಂದೆ 4 ನೇ ಆರೋಪಿ ಗೈರು ಹಾಜರಿದ್ದು ಅವರ ಪರವಾಗಿ ಅವರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ಯಾವುದೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ02/09/2020 ರಂದು ಸಂಜೆ 5-15 ಗಂಟೆಗೆ ಪೊಲಿಸರು ಗಸ್ತಿನಲ್ಲಿದ್ದಾಗ ಕೆಂಪು ಬಣ್ಣದ ಮಾರುತಿ 800 ಕಾರಿನಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತಿರುವ ಬಗಗೆ ಮಾಹಿತಿ ಬಂದಿದ್ದು ದಾಳಿ ನಡೆಸಲು ನನ್ನನ್ನು ಮತ್ತು ಚಾಸಾ 6 ರವರನ್ನು ಮಹಜರ್ ಸಾಕ್ಷಿಗಳಾಗುವಂತೆ ಕೋರಿ ನಾವು ಒಪ್ಪಿದ್ದು ನಾವು ಪೋಲಿಸರೊಂದಿಗೆ ಸ್ಥಳಕ್ಕೆ ಹೋದಾಗ ಕೆಂಪು ಕಾರೊಂದು ಬಾನೆಟ್ ಮೇಲೆ ಕಂದು ಬಣ್ಣದ ಪ್ಲಾಸ್ಟಿಕ್ ಕವರನ್ನು ಇಟ್ಟುಕೊಂಡು ಪೋಲಿಸರನ್ನು ನೋಡಿ ಸದರಿ ಆಸಾಮಿಗಳು ಪ್ಲಾಸ್ಟಿಕ್ ಚೀಲ ಹಿಡಿದುಕೊಡು ಓಡಿದ್ದು ನಮ್ಮ ಸಮಕ್ಷಮ ಅವರನ್ನು ಹಿಡಿದಾಗ ಅವರ ಹೆಸರು ರವಿ ಬಿನ್ ಗೋಪಾಲ ಹಾಗೂ ಇನ್ನೊಬ್ಬರು ಕಾಶಿನಾಥ ಬಿನ್ ರಾಮ ಎಂದು ತಿಳಿಸಿದ್ದು ಸದರಿ ಮದ್ಯವನ್ನು ಮಯೂರ ವೈನ್ ಶಾಪ್ ನಿಂದ ತಂದು ಹೆಚ್ಚು ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಬಂದಿರುವುದಾಗಿ ತಿಳಿಸಿದ್ದು ಸದರಿ ಪ್ಲಾಸ್ಟಿಕ್ ನಲ್ಲಿ ಕ್ಯಾಪ್ಟನ್ ಮಾರ್ಟಿನ್ ನ 90 ಎಂ ಎಲ್ ನ 48 ಮದ್ಯದ ಟೆಟ್ರಾ ಪ್ಯಾಕುಗಳು ಇದ್ದು , ಕಾರಿನ ಒಳಗೆ ಕುಳಿತಿದ್ದ ಮಂಜುನಾಥ ಬಿನ್ ಕೊರಗ ಅವರು 100 ರ 2 ನೋಟುಗಳನ್ನು ಹಾಜರುಪಡಿಸಿದ್ದು ಸದರಿ ಹಣ ಮದ್ಯ ಮಾರಾಟದಿಂದ ಬಂದ ಹಣ ಎಂದು ತಿಳಿಸಿದ್ದು ಸದರಿ ಹಣವನ್ನು ವಶಕ್ಕೆಪಡೇದು ಹಾಗೂ ಪ್ಲಾಸ್ಟಿಕ್ ಅನ್ನು ವಶಕ್ಕೆ ಪಡೆದು ಕೆ ಪಿ ಎಸ್ ಎಂಬ ಸೀಲ್ ಮಾಡಿ ಕಾರು ಸಂಖೆ ಕೆಎ-20 ಎಂ 8087 ಮಾರುತಿ 800 ಅನ್ನು ವಶಕ್ಕೆ ಪಡೆದು ಮಹಜರನ್ನು 5-40 ರಿಂದ 6-40 ರವರೆಗೂ ನನ್ನ ಹಾಗೂ ಚಾಸಾ 6 ರವರ ಸಮಕ್ಷಮ ಜರುಗಿಸಿಸಿದ್ದು ಆ ಸಮಯದಲ್ಲಿ ಪೊಟೋ ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಶೋದನಾ ಸಮುಚಿತವನ್ನು ತಯಾರಿಸಲಾಗಿತ್ತು ಎಂದರೆ ಸರಿಯಲ್ಲ.

ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ